<u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 62 |
| ಮಾನ್ಯ ಸದಸ್ಯರ ಹೆಸರು | : | ರಾಜೇಂದ್ರ ರಾಜಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 09.12.2024 |
| ಉತ್ತರಿಸುವ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

*****

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ತುಮಕೂರು ಜಿಲ್ಲೆಯಲ್ಲಿ ವಿವಿಧ ಬಗೆಯ ಕ್ಯಾನ್ಸರ್ ಪ್ರಕರಣಗಳಿಗೆ ಆಸ್ಪತ್ರೆಗಳಿಗೆ ದಾಖಲಾಗುತ್ತಿರುವಸಂಖ್ಯೆ ಎಷ್ಟು; (ಕಳೆದ 05 ವರ್ಷಗಳ ಸಂಪೂರ್ಣ ಮಾಹಿತಿ ನೀಡುವುದು).</td><td>ತುಮಕೂರು ಜಿಲ್ಲೆಯ ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಆರೋಗ್ಯ ಕ್ಷೇಮ ಕೇಂದ್ರಗಳ NCD Portal ವರದಿಯಂತೆ ದಾಖಲಾಗಿರುವ ಪ್ರಕರಣಗಳ ವಿವರಗಳು ಕೆಳಗಿನಂತಿವೆ: -
<table>
<tr><th colspan="4">Data From NCD Portal</th></tr>
<tr><th>ಕ್ರ. ಸಂ.</th><th>ವಿವರ</th><th>ವರ್ಷ</th><th>ಗುರುತಿಸಲಾಗಿರುವ ಕ್ಯಾನ್ಸರ್ ಪ್ರಕರಣಗಳು</th></tr>
<tr><td rowspan="5">1</td><td rowspan="5">ಬಾಯಿಕ್ಯಾನ್ಸರ್</td><td>2020-21</td><td>0</td></tr>
<tr><td>2021-22</td><td>74</td></tr>
<tr><td>2022-23</td><td>37</td></tr>
<tr><td>2023-24</td><td>17</td></tr>
<tr><td>2024-25</td><td>45</td></tr>
<tr><td></td><td colspan="2">ಒಟ್ಟು</td><td>173</td></tr>
<tr><td rowspan="5">2</td><td rowspan="5">ಸ್ತನಕ್ಯಾನ್ಸರ್</td><td>2020-21</td><td>1</td></tr>
<tr><td>2021-22</td><td>11</td></tr>
<tr><td>2022-23</td><td>9</td></tr>
<tr><td>2023-24</td><td>12</td></tr>
<tr><td>2024-25</td><td>41</td></tr>
<tr><td></td><td colspan="2">ಒಟ್ಟು</td><td>74</td></tr>
<tr><td rowspan="5">3</td><td rowspan="5">ಗರ್ಭಕಂಠಕ್ಯಾನ್ಸರ್</td><td>2020-21</td><td>2</td></tr>
<tr><td>2021-22</td><td>179</td></tr>
<tr><td>2022-23</td><td>72</td></tr>
<tr><td>2023-24</td><td>12</td></tr>
<tr><td>2024-25</td><td>27</td></tr>
<tr><td></td><td colspan="2">ಒಟ್ಟು</td><td>292</td></tr>
</table></td></tr>
<tr><td>ಆ)</td><td>ಸದರಿ ಜಿಲ್ಲಾ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣ ಮಾಡುವ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ:</td><td>ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಗುತ್ತಿಗೆ ಕರಾರು ದಿನಾಂಕ: 18.08.2021ರಂದು ವಹಿಸಲಾಗಿರುತ್ತದೆ. ಕಾಮಗಾರಿಯ ಪ್ರಸ್ತುತ ಹಂತದ ವಿವರಗಳು ಕೆಳಕಂಡಂತಿದೆ:<br><br>1. ನೆಲಮಹಡಿ:-ಒಳ ಹಾಗೂ ಹೊರಭಾಗದ ಪ್ಲಾಸ್ಟರಿಂಗ್ ಕೆಲಸ ಪೂರ್ಣಗೊಂಡಿದ್ದು, ಕಾರಿಡಾರ್‌ನಲ್ಲಿ ನೆಲಹಾಸು ಕಾಮಗಾರಿ ಪ್ರಗತಿಯಲ್ಲಿದೆ.<br>2. ಮೊದಲನೇಮಹಡಿ:-ಒಳ ಹಾಗೂ ಹೊರಭಾಗದ ಪ್ಲಾಸ್ಟರಿಂಗ್ ಕೆಲಸ, ನೆಲಹಾಸು ಕಾಮಗಾರಿ ಪೂರ್ಣಗೊಂಡಿದ್ದು ಒಳಭಾಗದಲ್ಲಿ ಬಣ್ಣ ಬಳಿಯುವ ಕೆಲಸ ಪ್ರಗತಿಯಲ್ಲಿದೆ.<br>3. ಎರಡನೇಮಹಡಿ:- ಒಳ ಹಾಗೂ ಹೊರಭಾಗದ ಪ್ಲಾಸ್ಟರಿಂಗ್ ಕೆಲಸ, ನೆಲಹಾಸು ಕಾಮಗಾರಿ ಪೂರ್ಣಗೊಂಡಿದ್ದು, ಒಳಭಾಗದಲ್ಲಿ ಬಣ್ಣ ಬಳಿಯುವ</td></tr>
</table>

| | | |
|---|---|---|
| | | ಕೆಲಸ ಪ್ರಗತಿಯಲ್ಲಿದೆ.<br><br>**ಇತರೆ ಪ್ರಗತಿಯಲ್ಲಿರುವ ಕೆಲಸಗಳು:-**<br>1. ಕಟ್ಟಡಕ್ಕೆ ಅಗ್ನಿ ನಿರೋಧಕ ವ್ಯವಸ್ಥೆ ಕಲ್ಪಿಸುವುದು<br>2. ಹೆಚ್.ವಿ.ಎ.ಸಿ ಕೆಲಸ ಪ್ರಗತಿಯಲ್ಲಿದೆ.<br>3. ಮೆಡಿಕಲ್ ಗ್ಯಾಸ್ ಪೈಪ್‌ಲೈನ್ ಅಳವಡಿಸುವ ಕಾಮಗಾರಿ<br>4. ಮಾಡ್ಯೂಲಾರ್ ಓ.ಟಿ ಕಾಮಗಾರಿ.<br>5. ಲಿಫ್ಟ್ ಅಳವಡಿಸುವ ಕಾಮಗಾರಿ.<br>6. ಕಟ್ಟಡದ ಹೊರಭಾಗದಲ್ಲಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಮಾಡಲು ಮಣ್ಣನ್ನು ಸಮತಟ್ಟು ಮಾಡುವ ಕಾಮಗಾರಿ.<br>7. ಕಟ್ಟಡದ ಒಳಭಾಗದ ವಿದ್ಯದೀಕರಣ ಕಾಮಗಾರಿ.<br>8. ನೀರು ಸರಬರಾಜು ಮತ್ತು ನೈರ್ಮಲೀಕರಣ ಕಾಮಗಾರಿ<br><br>ಮುಂದುವರೆದು, ಕಟ್ಟಡಕ್ಕೆ ಹೊರಭಾಗದಿಂದ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿರುತ್ತದೆ ಎಂದು ವೈದ್ಯಕೀಯ ಶಿಕ್ಷಣ ಇಲಾಖೆಯು ತಿಳಿಸಿದೆ. |
| | ಈ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣ ಕಾಮಗಾರಿಯನ್ನುಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು: | ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣ ಕಾಮಗಾರಿಯನ್ನು ದಿನಾಂಕ:31.03.2025ರ ಒಳಗಾಗಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ ಎಂದು ವೈದ್ಯಕೀಯ ಶಿಕ್ಷಣ ಇಲಾಖೆಯು ತಿಳಿಸಿದೆ. |

**ಆಕುಕ 158 ಎಸ್‌ಎಂಎಂ 2024**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು**